**ದಿ:17.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

ಮುಂದುವರೆದ **ಪಾಟೀ ಸವಾಲು:-**ಪ್ರತಿವಾದಿ ಪರ ಶ್ರೀ. **Y.H.,**ವಕೀಲರಿಂದ:-

ಈ ದಾವೆಗೆ ಹಾಜರುಪಡಿಸಿದಾಗ ವಾದಿಗಳು ಯಾವ ದಾಖಲೆಗಳನ್ನು ಹಾಜರುಪಡಿಸಿದರು ಎಂದು ನನಗೆ ನೆನಪಿರುವುದಿಲ್ಲ. ನಾನು ಈ ದಾವೆಗೆ ಹಾಜರಾದ ನಂತರ ವಕೀಲರ ಮೂಲಕ ವಾದಿ ಸಲ್ಲಿಸಿದ ದಾಖಲೆಗಳನ್ನು ಕೇಳಿ ತಿಳಿದುಕೊಂಡಿರುತ್ತೇನೆ . ವಾದಿ ಕಮಲಮ್ಮ ಅವರು ದತ್ತು ನೊಂದಾಣಿ ಪತ್ರವನ್ನು ಕೊಟ್ಟಿರುತ್ತಾರೆ , ಬೇರೆ ದಾಖಲೆಗಳ ಬಗ್ಗೆ ನನಗೆ ಗೋತ್ತಿರುವುದಿಲ್ಲ . ನಿಪಿ 13 ದತ್ತು ಪತ್ರವನ್ನು ವಾದಿ ಕಮಲಮ್ಮ ಮರಣಹೊಂದಿದ ನಂತರ ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ . ನಿಪಿ 13 ದತ್ತು ಪತ್ರವನ್ನು ಜನವರಿ 2017 ರಲ್ಲಿ ನೊಂದಾಣಿ ಆಗಿರುತ್ತದೆ , ನನಗೆ ದಿನಾಂಕ ನೆನಪಿರುವುದಿಲ್ಲ . ಸದರಿ ನಿಪಿ

13 ಅನ್ನು ಕಮಲಮ್ಮ ಅವರು ನೊಂದಾಣಿ ಮಾಡಿಸಿರುತ್ತಾರೆ , ನನಗೆ ಎಷ್ಟು ಬೆಲೆಯ ಮುದ್ರಿತ ಶುಲ್ಕ ಪಾವತಿ ಮಾಡಿಸಿರುವ ಬಗ್ಗೆ ಗೊತ್ತಿಲ್ಲ . ನಿಪಿ 13 ನೊಂದಾಣಿಯ ಕಾಲಕ್ಕೆ ನಾನು , ಕಮಲಮ್ಮ , ಮಾರಪ್ಪ , ಮಾರಣ್ಣ ಮತ್ತು ನಮ್ಮ ತಂದೆ ವೆಂಕಟಪ್ಪ ಹಾಜರು ಇದ್ದರು . ಅವರನ್ನು ಬಿಟ್ಟು ಬೇರೆ ಯಾರು ನಿಪಿ 13 ನೊಂದಾಣಿ ಕಾಲಕ್ಕೆ ಹಾಜರು ಇರಲಿಲ್ಲ . ನಿಪಿ 13 ದತ್ತುಪತ್ರ ರಚಿಸಿರುವ ಬರಹಗಾರರು ನಜೀರ್ ಎಂಬುವವರು ಇರುತ್ತಾರೆ . ಸದರಿ ನಜೀರ್ ಅವರ ಜೀವಂತ ಇರುವ ಬಗ್ಗೆ ನನಗೆ ಗೊತ್ತಿಲ್ಲ . ನಿಪಿ 13 ಕ್ಕ ಮಾರಪ್ಪ ಮತ್ತು ಮಾರಣ್ಣ ಅವರ ಸಾಕ್ಷಿಗಳಾಗಿರುತ್ತಾರೆ . ನಿಪಿ 13 ನೊಂದಾಯಿಸಿದ ನಂತರ ವಾದಿ 2 ಚೈತ್ರ ಅವರಿಗೆ ಸಂಬಂದಿಸಿದ ಹಾಗೆ ನಾನು ಯಾವ ದಾಖಲೆಗಳನ್ನು ಬದಲಾವಣೆ ಮಾಡಿಕೊಂಡಿರುವುದಿಲ್ಲ . ವಾದಿ 2 ರವರ ಶಾಲೆ ದಾಖಲೆಗಳು , ಆಧಾರ್ ಕಾರ್ಡ್ ರಲ್ಲಿ ಕಮಲಮ್ಮ ಅವರ ಹೆಸರು ಬದಲಾವಣೆ ಆಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದವರೆಸಿ ವಾದಿ 2 ರವರು ಒಂದನೇ ತರಗತಿಯಲ್ಲಿ ಶಾಲೆಗೆ ದಾಖಲು ಮಾಡಿರುವುದು ಕಮಲಮ್ಮ ಇರುತ್ತಾರೆ ಎಂದು ಹೇಳುತ್ತಾರೆ . ವಾದಿ 2 ರವರನ್ನು ಕಮಲಮ್ಮ ಬಿದರಕೆರೆ ಗೊಲ್ಲರಹಟ್ಟಿ ಗ್ರಾಮದ ಸರ್ಕಾರಿ ಶಾಲೆಗೆ ಸೇರಿಸಿರುತ್ತಾರೆ . ಸದರಿ ಶಾಲೆ ಈಗಲೂ ಇರುತ್ತದೆ . ವಾದಿ 2 ರವರಿಗೆ ಸಂಬಂದಿಸಿದ ಶಾಲೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ . ನಿಪಿ 1 ರಿಂದ 11 ದಾಖಲೆಗಳಲ್ಲಿ ವಾದಿ 2 ರವರಿಗೆ ಸಂಬಂದಿಸಿದ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸಾಕ್ಷಿ ಕಮಲಮ್ಮ ರವರು ಶಾಲೆಗೆ ಸೇರಿಸಿರುತ್ತಾರೆ , ನನ್ನ ಬಳಿ ಇರುವುದಿಲ್ಲ . ಕಮಲಮ್ಮ ಅವರು ತೀರಿ ಹೋದ ನಂತರ ವಾದಿ 2 ರವರನ್ನು ನಾನು ನೋಡಿಕೊಳ್ಳುತ್ತಿದ್ದೇನೆ . ಇವತ್ತಿಗೂ ಸಹ ವಾದಿ 2 ರವರ ತಂದೆ ತಾಯಿಯ ಹೆಸರು ನನ್ನ ಮತ್ತು ನನ್ನ ಹೆಂಡತಿ ಹೆಸರು ಇರುತ್ತದೆ ಎಂದರೆ ಸರಿ. ಈಗ ಸಾಕ್ಷಿಗೆ ವಾದಿ 2 ರವರ ಶಾಲಾ ಧೃಡೀಕರಣ ಪತ್ರ ವನ್ನು ತೋರಿಸಿದ್ದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ . ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಯನ್ನು ನಿಡಿ **1** ಎಂದು ಗುರುತಿಸಲಾಯಿತು. ಸದರಿ ನಿಡಿ 1 ರಂತೆ ವಾದಿ 2 ರವರ ಜನ್ಮ ದಿನಾಂಕ 21.09.2009 ಇರುತ್ತದೆ ಎಂದರೆ ಸರಿ. ವಾದಿ ಕಮಲಮ್ಮ ವಂಶಕ್ಕೂ ಮತ್ತು ನಮಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 12 ದಾಖಲೆಯನ್ನು ವಾದಿ ಕಮಲಮ್ಮ ರವರು ಈ ಸುಮಾರು 4-5 ವರ್ಷದ

ಹಿಂದೆ ಮಾಡಿರುತ್ತಾರೆ . ನಿಪಿ 12 ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸರಿ. ನಿಪಿ 12 ದಾಖಲೆಯನ್ನ ನಾನು ಎಲ್ಲಿ ತಯಾರು ಮಾಡಿರುತ್ತೇನೆ ಗೊತ್ತಿರುವುದಿಲ್ಲ . ನಿಪಿ 12 ಯಾರು ನೋಟರಿ ಮಾಡಿರುತ್ತಾರೆ ಗೊತ್ತಿರುವುದಿಲ್ಲ . ನಿಪಿ 12 ದಾಖಲೆಯನ್ನು ತಯಾರಿಸುವ ಕಾಲಕ್ಕೆ ನಾನು ಪ್ರತಿವಾದಿಗಳಿಗೆ ತಿಳಿಸಿರುವುದಿಲ್ಲ ಎಂದರೆ ಸರಿ. ನಿಪಿ 12 ವಂಶವೃಕ್ಷ ತಯಾರಿಸುವ ಬಗ್ಗೆ ಪ್ರತಿವಾದಿಗಳ ಗಮನಕ್ಕೆ ಇರುವುದಿಲ್ಲ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ಲಪಾಟಾಯಿಸುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಠಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿ ಕಮಲಮ್ಮ ಅವರು ವಾದಿ 2 ರವರನ್ನು ತಮ್ಮ ಇಷ್ಟಾನುಸಾರ ದತ್ತುಗೆ ಪಡೆದುಕೊಂಡಿರುತ್ತಾರೆ . ವಾದಿ ಕಮಲಮ್ಮ ಅವರು ಯಾವ ಉದ್ದೇಶದಿಂದ ವಾದಿ 2 ರವರನ್ನು ದತ್ತು ಪಡೆದುಕೊಂಡ ಬಗ್ಗೆ ನನಗೆ ಹೇಳಲು ಬರುವುದಿಲ್ಲ . ವಾದಿ 2 ರವರು ಇವತ್ತಿಗೂ ಸಹ ನಮ್ಮ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸಾಕ್ಷಿ ಕಮಲಮ್ಮ ಅವರು ಮರಣಾ ನಂತರ ಅವರನ್ನು ನೋಡಿಕೊಳ್ಳಲು ಯಾರು ಇಲ್ಲದೇ ಇರುವ ಕಾರಣ ನಮ್ಮ ಮನೆಯಲ್ಲಿ ವಾಸವಿರುತ್ತಾರೆ ಎಂದು ಹೇಳುತ್ತಾರೆ . ಕಮಲಮ್ಮ ಅವರಿಗೆ ಸೇರಿದ ಮನೆಯಲ್ಲಿ ಯಾರು ಸಹ ವಾಸವಿರುವುದಿಲ್ಲ . ಕಮಲಮ್ಮ ಅವರ ಮನೆಗೆ ಸಂಬಂದಿಸಿದ ದಾಖಲೆಗಳು ಸಿಗುವುದಿಲ್ಲ . ಕಮಲಮ್ಮ ಅವರ ಸಮಾದಿ ನಾನು ನೋಡಿರುತ್ತೇನೆ . ಕಮಲಮ್ಮ ಅವರನ್ನು ಅವರ ಜಮೀನಿನಲ್ಲಿ ಸಮಾದಿ ಮಾಡಿರುತ್ತಾರೆ , ಅದಕ್ಕೆ ಸಂಬಂದಿಸಿದ ಪೋಟೋ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ . ವಾದಿ 2 ರವರು ವಾದಿ ಕಮಲಮ್ಮ ಅವರ ಸಮಾದಿಗೆ ಪೂಜೆ ಮಾಡಿದ ಬಗ್ಗೆ ದಾಖಲೆಗಳು ಇರುತ್ತದೆ, ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ . ವಾದಿ ಕಮಲಮ್ಮ ಮತ್ತು ನಮಗೆ ಯಾವುದೇ ಸಂಬಂದ ಇಲ್ಲದೇ ಇರುವ ಕಾರಣ ಪ್ರತಿವಾದಿಗಳೇ ಅವರ ಅಂತ್ಯಸಂಸ್ಕಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ 2 ರವರನ್ನು ಕಮಲಮ್ಮ ಅವರಿಗೆ ಭೌತಿಕವಾಗಿ ಯಾವುದೇ ದತ್ತು ನೀಡಿರುವುದಿಲ್ಲ , ನಾವು ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆದ ಕಾರಣ ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು